ದಿನಾಂಕ 14-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ. ಎನ್.ವಿ.ಆರ್. ಪ್ರತಿವಾದಿ ಪರ ವಕೀಲರಿಂದಃ-**

ಈ ದಾವೆಯಲ್ಲಿ ನಾನು ದಾವಾ ಸ್ವತ್ತು ನಾರಾಯಪ್ಪನವರಿಗೆ ಸೇರಿದ್ದು ಎಂದು ಹೇಳಿರುತ್ತೇನೆ. ದಾವಾ ಸ್ವತ್ತು ಪೋತಲಪ್ಪ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಪೋತಲಪ್ಪನಿಗೆ 2 ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳು ಇದ್ದಾರೆ. ಒಬ್ಬರ ಹೆಸರು ಸಾಕಮ್ಮ, ಇನ್ನೊಬ್ಬಳ ಹೆಸರು ನನಗೆ ಗೊತ್ತಿಲ್ಲ. ಗಂಡು ಮಕ್ಕಳು ಎಂದರೆ ಅವರ ಹೆಸರು ವೆಂಕಟರಾಯಪ್ಪ ಮತ್ತು ಇನ್ನೊಬ್ಬರ ಹೆಸರು ನಾರಾಯಣಪ್ಪ.

ಪೋತಲಪ್ಪನವರಿಗೆ 6 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪೋತಲಪ್ಪ ನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಪೋತಲಪ್ಪ ನ ಹೆಂಡತಿ ಹೆಸರು ಚೆನ್ನಮ್ಮ ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೋತಲಪ್ಪ ನಿಗೆ 6 ಜನ ಮಕ್ಕಳು, ದೊಡ್ಡವರ ಹೆಸರು ವೆಂಕಟರಾಯಪ್ಪ ಎಂದರೆ ಸಾಕ್ಷಿಯು ವೆಂಕಟರಾಯಪ್ಪ ಮತ್ತು ನಾರಾಯಣಪ್ಪ ಇಬ್ಬರೇ ಮಕ್ಕಳು ಎಂದು ನುಡಿಯುತ್ತಾರೆ. ಪೋತಲಪ್ಪನ 2 ನೇ ಮಗಳ ಹೆಸರು ಮುನಿವೆಂಕಟಮ್ಮ ಎಂದರೆ ನನಗೆ ಗೊತ್ತಿಲ್ಲ. ಪೋತಲಪ್ಪ ನ 3 ನೇ ಮಗಳು ನಾರಾಯಣಮ್ಮ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪೋತಲಪ್ಪ ನ ಹೆಣ್ಣು ಮಕ್ಕಳು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೋತಲಪ್ಪನ 4 ನೇ ಮಗಳ ಹೆಸರು ಚಿಕ್ಕಮುನಿವೆಂಕಟಮ್ಮ ಮತ್ತು 5 ನೇ ಯವರ ಹೆಸರು ಸೀತಮ್ಮ ಮತ್ತು 6 ನೇಯವರ ಹೆಸರು ನಾರಾಯಪ್ಪ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ಅಸಲು ದಾವಾ ಸಂಖ್ಯೆ 118/2020 ನ್ನು ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಚಿಂತಾಮಣಿಯಲ್ಲಿ ಹೂಡಿರುತ್ತಾರೆ ಎಂದರೆ ಸಾಕ್ಷಿಯು ವೆಂಕಟರಾಯಪ್ಪನವರ ಆಸ್ತಿಗೆ ಸಂಬಂಧಪಟ್ಟಂತೆ ಅವರು ದಾವೆಯನ್ನು ಹೂಡಿರುತ್ತಾರೆ, ಆದರೆ ಈ ದಾವಾ ಆಸ್ತಿಗೂ ಆ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ವೆಂಕಟರಾಯಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 3 ಜನ ಎಂದು ನುಡಿಯುತ್ತಾರೆ. ಅವರ ಹೆಸರುಗಳು ಎಂದರೆ ಸಾಕಮ್ಮ, ವೆಂಕಟರವಣಪ್ಪ, ಉಳಿದವರ ಹೆಸರು ನನಗೆ ಗೊತ್ತಿಲ್ಲ. ವೆಂಕಟರಾಯಪ್ಪನವರಿಗೆ 3 ಜನ ಮಕ್ಕಳು, ಅವರುಗಳೆಂದರೆ ವೆಂಕಟರಾಯಪ್ಪ, ನಾರೆಮ್ಮ ಮತ್ತು ನಾರಾಯಣಮ್ಮ ಎಂದರೆ ನನಗೆ ಗೊತ್ತಿಲ್ಲ. ವೆಂಕಟರಾಯಪ್ಪನ ಮಗ ವೆಂಕಟರಾಯಪ್ಪನಿಗೆ ಇಬ್ಬರು ಗಂಡು ಮಕ್ಕಳು. ವೆಂಕಟರಾಯಪ್ಪನ ಮಗ ವೆಂಕಟರಾಯಪ್ಪನಿಗೆ 3 ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

ಅವರ ಕುಟುಂಬಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ಅವರ ಕುಟುಂಬದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇರುವುದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವೆಂಕಟರಾಯಪ್ಪರವರು ಊರಿನಲ್ಲಿ ಇರಲಿಲ್ಲ, ಆದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವೆಂಕಟಮ್ಮ ಗಂಡ ದೊಡ್ಡ ನಾರಾಯಣಸ್ವಾಮಿ ಎಂದು ನಾನು ತೋರಿಸಿರುವ ದಾಖಲೆಗಳಲ್ಲಿ ಅವರಿಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದೊಡ್ಡನಾರಾಯಣಸ್ವಾಮಿಯ ಹೆಂಡತಿ ವೆಂಕಟಮ್ಮ ಮತ್ತು ಅವರ ಮಗಳು

ಪಾರ್ವತಮ್ಮ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರ್ ಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಈ ಕುಟುಂಬಕ್ಕೆ ಸೇರಿದವಳು ಅಲ್ಲದೇ ಇರುವುದರಿಂದ ನಾನು ದಾವಾ ಆಸ್ತಿಗಳಲ್ಲಿ ಭಾಗವನ್ನು ಪಡೆಯಲು ಕಾನೂನು ರೀತಿಯಾಗಿ ಅರ್ಹಳಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ 6 ಮನೆಗಳು ಲಕ್ಷ್ಮೀದೇವನಕೋಟೆಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಆಚೆಕಡೆಗೆ ಹೋಗುತ್ತಿರಲಿಲ್ಲ, ಆದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕನಾರಾಯಣಸ್ವಾಮಿರವರ ವಿರೋಧಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಪೋತಲಪ್ಪನ 6 ಜನ ಮಕ್ಕಳಿಗೂ ಸಹ ಭಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆಲ್ಲಾ ಸೆಟಲ್ ಮೆಂಟ್ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಪೋತಲಪ್ಪನ 6 ಜನ ಮಕ್ಕಳು ಈಗಾಗಲೇ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪೋತಲಪ್ಪನ 6 ಜನ ಮಕ್ಕಳು ವಿಭಾಗ ಮಾಡಿಕೊಂಡ ದಾಖಲೆಗಳನ್ನು ನಾನು ನೋಡಿಲ್ಲ. ಪೋತಲಪ್ಪನ 6 ಜನ ಮಕ್ಕಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಈಗಲೂ ಇದ್ದಾರೆ ಎಂದರೆ ಸರಿಯಲ್ಲ. ನಾನು ಒಟ್ಟು ಕುಟಂಬಕ್ಕೆ ಸೇರಿದವಳು ಅಲ್ಲ, ಆ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ರೂಪಾ.ಸಿ. ವಗ್ಗಾ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.